# ಗಾಂಧಿನಗರ ಪೋಸ್ಟ್

## 'ಮೋಂಬತ್ತಿ' ಬೆಳಕಲ್ಲಿ ನೀತು

ನೀತು ಲವಲವಿಕೆಯನ್ನು ಆವಾಹಿಸಿಕೊಂಡಿದ್ದರು. ದೇಹದ ತೂಕದ ಬಗ್ಗೆ ಪ್ರಶ್ನೆ ಎದುರಾದಾಗಲೂ ಅವರ ಮುಖದಲ್ಲಿನ ನಗು ಮಾಸಲಿಲ್ಲ.

ಇತ್ತೀಚಿನ ದಿನಗಳಲ್ಲಿ ನೀತು ಎಲ್ಲಿ ಹೋದರೂ ದೇಹದ ತೂಕದ ಪ್ರಶ್ನೆಯೇ ಅವರಿಗೆ ಎದುರಾಗುತ್ತಿತ್ತು. ಬೇರೆಯವರ ಕಾಳಜಿಯ ಮಾತುಗಳಿರಲಿ, ಸ್ವತಃ ನೀತು ಅವರಿಗೆ ದೇಹ ತಮ್ಮ ಮಾತು ಕೇಳುತ್ತಿಲ್ಲ ಎನ್ನಿಸಿತ್ತು. ಕುಣಿಯುತ್ತಿದ್ದರೆ ನೆಲ ನಡುಗುತ್ತಿರುವ ಅನುಭವ ಅವರಿಗಾಗುತ್ತಿತ್ತು. ಇದ್ಯಾಕೋ ವಿಪರೀತಕ್ಕಿಟ್ಟುಕೊಂಡಿತು ಅನ್ನಿಸಿದಾಗ, ಆಸ್ಪತ್ರೆಗೆ ಸೇರಿ ಹೆಚ್ಚಿನ ಕೊಬ್ಬು ಕರಗಿಸಿಕೊಳ್ಳಲು ನಿರ್ಧರಿಸಿದ್ದರು. ಆ ಸಂದರ್ಭದಲ್ಲಿ ಬಂಧುಮಿತ್ರರಿಂದ ಸಲಹೆಗಳ ಮಹಾಪೂರವೇ ಹರಿದುಬಂತು. ಕೊನೆಗೆ ಸಹಜವಾಗಿಯೇ ತೂಕ ಇಳಿಸಿಕೊಳ್ಳಲು ಮುಂದಾದ ಅವರು, ಆ ನಿಟ್ಟಿನಲ್ಲಿ ಸಾಕಷ್ಟು ಯಶಸ್ವಿಯೂ ಆಗಿದ್ದಾರೆ.

'ಮೋಂಬತ್ತಿ' ಚಿತ್ರದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಚೆಗೆ ತಮ್ಮ ಆರೋಗ್ಯ ಸುಧಾರಿಸುತ್ತಿದ್ದು ತೂಕದ ಬಗ್ಗೆ ನಕಾರಾತ್ಮಕ ಅಭಿಪ್ರಾಯಗಳೇನೂ ಕೇಳಿಬರುತ್ತಿಲ್ಲ ಎಂದರು. ಸಿನಿಮಾಗಳಲ್ಲಿ ಸತತ ಅವಕಾಶಗಳು ದೊರೆಯದ ಬಗ್ಗೆ ಅವರಿಗೆ ಬೇಸರವೇನೂ ಇಲ್ಲ. ಕಳೆದ ಹದಿಮೂರು ವರ್ಷಗಳಲ್ಲಿ ಇಪ್ಪತ್ತೈದಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿರುವ ಬಗ್ಗೆ, ಅವುಗಳಲ್ಲಿ ಒಂದಷ್ಟು ಅರ್ಥಪೂರ್ಣ ಪಾತ್ರಗಳಲ್ಲಿ ಕಾಣಿಸಿಕೊಂಡಿರುವ ಬಗ್ಗೆ ಅವರಿಗೆ ಖುಷಿಯಿದೆ. ಇತ್ತೀಚಿನ ದಿನಗಳಲ್ಲಂತೂ ಕಿರುತೆರೆಯಲ್ಲೂ ಅವರು ಬಿಜಿಯಾಗಿದ್ದಾರೆ. 'ಬಿಗ್‌ಬಾಸ್'ನ ಇತ್ತೀಚಿನ ಆವೃತ್ತಿಯ ಸ್ಪರ್ಧಿಗಳಲ್ಲಿ ಒಬ್ಬರಾಗಿದ್ದ ಅವರಿಗೆ ಅಲ್ಲಿನ ಅನುಭವ ಹೊಸ ಹೊಸ ಪಾಠಗಳನ್ನು ಕಲಿಸಿದೆ.

'ಮೋಂಬತ್ತಿ' ಚಿತ್ರದಲ್ಲಿ ನೀತು ಪೊಲೀಸ್ ಅಧಿಕಾರಣಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸಾಹಸ ದೃಶ್ಯಗಳಿಗೆ ಸಾಕಷ್ಟು ಅವಕಾಶವಿರುವ ಕಥೆಯಲ್ಲಿ ಹ್ಯೂಮರ್ ಎಳೆಯೂ ಇದೆಯಂತೆ. ಶ್ರೀನಿವಾಸ್ ಕೌಶಿಕ್ ನಿರ್ದೇಶನದ ಈ ಸಿನಿಮಾ ಥ್ರಿಲ್ಲರ್ ಜಾಡಿಗೆ ಸೇರಿದ್ದು, ಪ್ರೇಕ್ಷಕರಿಗೆ ಇಷ್ಟವಾಗಲಿದೆ ಎನ್ನುವ ನಿರೀಕ್ಷೆ ಅವರದು. 'ಬಿಗ್‌ಬಾಸ್' ಖ್ಯಾತಿಯ ಸಂಜನಾ ವಿಶೇಷ ಗೀತೆಯೊಂದರಲ್ಲಿ ಕಾಣಿಸಿಕೊಂಡಿರುವುದು ಈ ಚಿತ್ರದ ಇನ್ನೊಂದು ವಿಶೇಷ.





# ಜಿಂದಾ ಎಂಬ ಹೊಸಕನಸು



ಮೇಘನಾ ರಾಜ್ ನಟನೆಯ ಹೊಸ ಚಿತ್ರ 'ಜಿಂದಾ' ಬಿಡುಗಡೆಗೆ ಸಿದ್ಧವಾಗಿದೆ. ಮಹೇಶ್ ನಿರ್ದೇಶನದ ಈ ಸಿನಿಮಾ ಗಾಂಧಿನಗರದ ಎಲ್ಲ ಜನಪ್ರಿಯ ಸೂತ್ರಗಳನ್ನು ಒಳಗೊಂಡಿರುವ ಸಿನಿಮಾ.

ಮೇಘನಾ ಅಪ್ಪಟ ಕನ್ನಡದ ನಟಿ. ಅಭಿನಯದ ಜೊತೆಗೆ ಗ್ಲಾಮರ್ ನಲ್ಲೂ ತಾವೇನೂ ಕಡಿಮೆಯಿಲ್ಲ ಎನ್ನುವುದನ್ನು ಅವರು ಈಗಾಗಲೇ ಹಲವು ಸಿನಿಮಾಗಳಲ್ಲಿ ಸಾಬೀತುಪಡಿಸಿದ್ದಾರೆ. ನಾಗಾಭರಣ ನಿರ್ದೇಶನದ 'ಅಲ್ಲಮ' ಚಿತ್ರದಲ್ಲಿನ ಮಾಯೆಯ ಪಾತ್ರ ಅವರೊಳಗಿನ ಕಲಾವಿದೆಯ ಅನಾವರಣಕ್ಕೆ ಒಳ್ಳೆಯ ಅವಕಾಶ ಕಲ್ಪಿಸಿತ್ತು. 'ಅಲ್ಲಮ'ದ ನಂತರ ತೆರೆಕಾಣುತ್ತಿರುವ 'ಜಿಂದಾ' ಚಿತ್ರದಲ್ಲಿ ಮೇಘನಾ ಬೇರೆಯೇ ಆಯಾಮದ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರಂತೆ. ನೈಜ ಜೀವನದ ಘಟನೆಯೊಂದನ್ನು ಆಧರಿಸಿದ ಈ ಸಿನಿಮಾದಲ್ಲಿ ನಾಯಕಿಯ ಪಾತ್ರಕ್ಕೂ ಸಾಕಷ್ಟು ಅವಕಾಶ ಇದೆ ಎನ್ನಲಾಗಿದೆ. ಮೇಘನಾಗೆ ಜೋಡಿಯಾಗಿ ಯುವರಾಜ್ ನಟಿಸಿದ್ದಾರೆ.

ಮಹೇಶ್ ಪಾಲಿಗೆ ಕೂಡ 'ಜಿಂದಾ' ನಿರೀಕ್ಷೆಯ ಸಿನಿಮಾ. ನೈಜ ಜೀವನದ ಕಥಾನಕವನ್ನು ದೃಶ್ಯ ಮಾಧ್ಯಮಕ್ಕೆ ಅಳವಡಿಸುವುದು ಅವರಿಗೆ ಸವಾಲೆನ್ನಿಸಿದೆ. ಆ ಸವಾಲನ್ನು ಅವರು ಪ್ರೀತಿಯಿಂದಲೇ ನಿರ್ವಹಿಸಿದ್ದಾರಂತೆ. ನಿರ್ದೇಶನದ ಜೊತೆಗೆ ಕಥೆ, ಚಿತ್ರಕಥೆ, ಸಂಭಾಷಣೆಯ ಆಲ್‌ರೌಂಡರ್ ಪಾತ್ರವನ್ನೂ ಅವರು ನಿರ್ವಹಿಸಿದ್ದಾರೆ. ದರ್ಶನ್ ಅವರ 'ಪೊರ್ಕಿ' ಚಿತ್ರವನ್ನು ನಿರ್ಮಿಸಿದ್ದ ದತ್ತಾತ್ರೇಯ ಬಚ್ಚೇಗೌಡ ಚಿತ್ರಕ್ಕೆ ಬಂಡವಾಳ ತೊಡಗಿಸಿದ್ದಾರೆ. ಸ್ಟಾರ್ ಸಿನಿಮಾಗಳ ಭರಾಟೆ ಕಡಿಮೆಯಾಗಿರುವ ಸಂದರ್ಭದಲ್ಲಿ ಅವರು ತಮ್ಮ ಚಿತ್ರವನ್ನು ತೆರೆಕಾಣಿಸುತ್ತಿದ್ದಾರೆ (ಜೂನ್ 9ರಂದು). ಶ್ರೀನಿವಾಸಮೂರ್ತಿ, ಪದ್ಮಾ ವಾಸಂತಿ, ಗಿರಿಜಾ ಲೋಕೇಶ್ ತಾರಾಗಣದಲ್ಲಿರುವ ಪ್ರಮುಖರು. ಶ್ರೀಧರ್ ಸಂಭ್ರಮ್ ಸಂಗೀತ ಹಾಗೂ ನಾಗೇಂದ್ರ ಆಚಾರ್ಯ ಛಾಯಾಗ್ರಹಣ ಚಿತ್ರಕ್ಕಿದೆ.